# 3

ಅಮ್ಮ ಮತ್ತು ಹೆಂಡತಿಯೆದುರು ವಿಷಯವನ್ನು ಪ್ರಸ್ತಾಪಿಸುವಾಗ – ಇಬ್ಬರೂ, ಕ್ಷಣಗಳಷ್ಟು ಕಾಲ, ಮುಖ ಮುಖ ನೋಡಿಕೊಂಡರು! ಬಳಿಕ, ಒಬ್ಬರಾದ ಮೇಲೊಬ್ಬರು ಸರತಿ ತಾಳಿ – ಒಂದೇ ಸಮ ನನ್ನನ್ನು ಜಡಿದರು!

'ನಮ್ಮ ಸಂಸ್ಕೃತಿ ಅಂದರೇನು ಅಂತ ಈಗಲಾದರೂ ಅರ್ಥ ಮಾಡಿಕೋ, ಸರಸೂ... ಏನೇ ಇರಲಿ, ನಮ್ಮ ನಂಬಿಕೆಗಳನ್ನು ಬಿಟ್ಟುಕೊಡಬಾರದು... ಆಗಲೇ ನಮಗೆ ಶ್ರೇಯಸ್ಸು... ಇದೇ ಕಾರಣಕ್ಕೆ ನಾನು ಬದರೀನಾಥ ಸತ್ತಾಗಲೂ, ಅವರಿವರ ಕಾಲು ಹಿಡಿದು – ಅವನ ಸಲುವಾಗಿ ಒಂದು ಬ್ರಾಹ್ಮಣಾರ್ಥ ನೆರವೇರಿಸಿದ್ದು. ಹುಟ್ಟಿದಾಗಿನದಕ್ಕಿಂತ ಸತ್ತ ಬಳಿಕದ ಕ್ರಿಯಾಕರ್ಮ ಮುಖ್ಯ ಗೊತ್ತೇನೋ?! ಯಾರೋ ಏನೋ – ಈ ಹೆಣ್ಣು ಹೆಂಗಸಿಗೇ ಇಷ್ಟು ಕಾಳಜಿ ಇದೆ ಅಂದಮೇಲೆ ಗಂಡಸಾದ ನಿನಗೆ ಇರಬೇಕಲ್ಲವಾ?!' ಅಮ್ಮ ಉಪನ್ಯಾಸಕ್ಕೇ ತೊಡಗಿಬಿಟ್ಟಳು. 'ಸಂಸ್ಕಾರ ಅಂತಂದರೆ ಪಿತೃಯಜ್ಞ ಅಂತ ಅರ್ಥ... ಮೊದಲಿದನ್ನ ತಿಳಿಕೋ... ಆ ಹೆಣ್ಣು ಯಾರೇ ಆಗಿರಲಿ, ಮೊದಲು ಅವಳ ಅವಳ ಕಾಲು ಸಂದಿ ನುಸೀಕ್ಕೊಂಡು ಬಾ!'

ಕುಂದಗೌರಿಯಂತೂ ಶರ್ಲೀ ವರ್ಕಿಯನ್ನು ಮನಸಾರೆ ಕೊಂಡಾಡತೊಡಗಿದಳು.

'ಆ ಸತ್ತವರು ಯಾರೇ ಇರಲಿ, ಪುಣ್ಯ ಮಾಡಿ ಸತ್ತರು ಕಣ್ರೀ... ಎರಡು ಥರದ ಪುಣ್ಯ. ನೋಯದೆ ನುಲಿಯದೆ ನಿದ್ದೆಯಲ್ಲೇ ಹೋಗೋದು ಒಂದು ಪುಣ್ಯ ಆದರೆ, ಯಾರೂ ಇಲ್ಲದೆ ಇದ್ದರೂ ಈ ಥರದ ಸಂಸ್ಕಾರ ಅಂತಂದರೆ ಇನ್ನೂ ದೊಡ್ಡ ಪುಣ್ಯ ಅಲ್ಲವಾ?' ಹೀಗೆ – ಸತ್ತವರನ್ನೂ, ಸತ್ತ ಬಳಿಕದ ಕ್ರಿಯಾಕರ್ತೃವನ್ನೂ – ಕುಂದಗೌರಿ ಒಟ್ಟೊಟ್ಟಿಗೆ ಹೊಗಳಿದಳು. 'ಎಲ್ಲಿ? ಆಕೆಗೆ ಫೋನು ಮಾಡಿಕೊಡಿ... ನಾನೇ ಮಾತಾಡುತೀನಿ... ಇದರಷ್ಟು ಪುಣ್ಯದ ಕೆಲಸ ಇನ್ನೊಂದಿಲ್ಲ ಅಂತ ಆಕೆಗೆ ಹೇಳುತೀನಿ...'

ಇಷ್ಟರಲ್ಲಿ, ಅನೂಪ – ಅಂದರೆ ನನ್ನ ಮತ್ತು ಶರ್ಲೀ ವರ್ಕಿಯ ಇನ್ನೊಬ್ಬ ಓರಗೆಯ ಸಹಪಾಠಿ, ಫೋನು ಮಾಡಿದ್ದರಿಂದ ವಿಷಯ ಇದ್ದಲ್ಲೇ ಮೊಟಕುಕೊಂಡಿತು. ಅಥವಾ, ಮೊಟಕುಕೊಂಡಿತು – ಅಂದಿದ್ದೂ ಸುಳ್ಳೇನೇ! ನಿಜಕ್ಕೂ ಇನ್ನೊಂದೇ ಆಗಿ ಬೆಳೆಯಿತು!

ನಾನು ಅನೂಪನೊಡನೆ ಮಾತನಾಡುತ್ತಿರುವ ಸುಮಾರಿನಲ್ಲಿಯೇ, ಕುಂದಗೌರಿ, ತನ್ನ ಫೋನಿನಿಂದ ಯಾರಿಗೋ ಡಯಲು ಹಚ್ಚಿ ಮಾತಿಗೆ ತೊಡಗಿದಳು. ಸ್ವಲ್ಪ ಹೊತ್ತಿನ ಹಿಂದೆ, ನನ್ನೆದುರು ಶರ್ಲೀ ವರ್ಕಿಯನ್ನು ಕೊಂಡಾಡಿದಳಲ್ಲ – ಅವವೇ ಮಾತುಗಳನ್ನು, ಈಗ 'ದ್ವಿತೀಯ ಪುರುಷ'ದಲ್ಲಿ ಸಂಬೋಧಿಸಿ ಫೋನಿನಲ್ಲಿ ಒಪ್ಪಿಸಿದ್ದನ್ನು ಕೇಳಿಸಿಕೊಂಡಿದ್ದೇ, ನನಗೆ, ಇವಳು 'ಅವಳಿಗೇ' ಫೋನು ಮಾಡಿರುವಳೆಂದು ಅರ್ಥವಾಗಿಹೋಯಿತು! ಅರೇ... ನಂಬರೆಲ್ಲಿ ಸಿಕ್ಕಿತೆಂದು ಆಶ್ಚರ್ಯಪಡುವಾಗಲೇ, ಅವಳ ಕೈಯಲ್ಲಿದ್ದ ಸಣ್ಣದೊಂದು ಚೀಟಿಯನ್ನು ನೋಡಿ, ಅದರಲ್ಲಿ ಶರ್ಲೀ ವರ್ಕಿಯ ನಂಬರೂ ಇದ್ದುದು ನೋಡಿ – ನನ್ನ ಬೆರಗಷ್ಟೂ ದುಪ್ಪಟ್ಟಾಗಿಹೋದವು! ಕುಂದಗೌರಿ, 'ಆರ್ಯಾವರ್ತ'ವೆಂಬ 'ಸಂಸ್ಕಾರ'ಕೇಂದ್ರಕ್ಕೇ ಫೋನು ಮಾಡಿ – ಶರ್ಲೀ ವರ್ಕಿಯ ಬಗ್ಗೆ ವಿಷಯ ತಿಳಿಸುವಾಗ, ಅವರೇ ಅವಳ ನಂಬರನ್ನು ಇವಳಿಗೆ ಕೊಟ್ಟರೆಂಬುದೂ – ಆ ಬಳಿಕ ನನಗೆ ತಿಳಿಯಿತು!

ಶರ್ಲೀ ವರ್ಕಿಯೊಡನೆ ನನ್ನ ಹೆಂಡತಿಯ ಮಾತು ಮುಗಿಯುವ ಹೊತ್ತಿಗೇ – ಅನೂಪನೊಡನೆಯ ನನ್ನ ಮಾತೂ ಮುಗಿಯಿತು. ಅನೂಪನಾದರೂ ಶರ್ಲೀ ಹೇಳಿದ ಸಂಗತಿಯನ್ನೇ ಪುನರಾವರ್ತಿಸಿ, ಸಾಕೇತರಾಮರ ಅಪರಕರ್ಮಗಳನ್ನು ಅನಿರ್ಬಂಧಿತವಾಗಿ ಜರುಗಿಸುವುದಕ್ಕೆ ಸಹಾಯ ಮಾಡೆಂದು – ನನ್ನಲ್ಲಿ ವಿನಂತಿಸಿಕೊಂಡ!

ನಾನು ಈ ಪರಿಯ ಕ್ರಿಯಾಕರ್ಮಗಳ ಬಗ್ಗೆ ನನ್ನೊಳಗಿನ ಸಂದೇಹ ತೋಡಿಕೊಳ್ಳುವಾಗ, 'ಜಗತ್ತು